# 10

# ಯೇಸು: ನಮ್ಮ ದೈವಿಕ ಉದಾಹರಣೆ

ಅನೇಕ ಕಾರಣಗಳಿಗಾಗಿ, ಮಹೋನ್ನತನ ಏಕ ಕುಮಾರನು ಈ ಭೂಲೋಕಕ್ಕೆ ಬರಲು ತನ್ನನ್ನು ತಗ್ಗಿಸಿಕೊಂಡನು. ಒಂದು ಕಾರಣವು ಪರ್ವತ ಪ್ರಸಂಗವನ್ನು ಹಾಗೂ ಇತರ ಅನೇಕ ದೈವಿಕ ಬೋಧನೆಗಳನ್ನು ಕೊಡಲಿಕ್ಕಾಗಿತ್ತು. ಇನ್ನೊಂದು ಕಾರಣವು ಆತನು ತನ್ನ ರಕ್ತವನ್ನು ಸುರಿಸಲಿಕ್ಕೆ ಬಂದನು. ಇನ್ನೂ ಇನ್ನೊಂದು ಕಾರಣವು ಮರಣವನ್ನು ಜಯಿಸುವುದಾಗಿತ್ತು. ಆತನು ನಮ್ಮ ಉದಾಹರಣೆಯಾಗಲಿಕ್ಕಾಗಿ ಆತನು ಬಂದನು. ಚಿಕ್ಕಮಕ್ಕಳು ತಮ್ಮ ತಂದೆತಾಯಿಗಳನ್ನು ಅನುಕರಿಸುವರು ಎಂಬುದನ್ನು ಪರಲೋಕದ ತಂದೆಯು ಬಲ್ಲವನಾಗಿದ್ದನು. ವಯಸ್ಕರಿಗೂ ಉದಾಹರಣೆಯ ಅಗತ್ಯತೆಯಿರುವದನ್ನು ಆತನು ತಿಳಿದಿದ್ದನು. ಆತನ ಹೆಜ್ಜೆ ಜಾಡಗಳಲ್ಲಿ ನಮ್ಮಲ್ಲಿ ಯಾರೂ ಪರಿಪೂರ್ಣವಾಗಿ ಅನುಸರಿಸಲು ಶಕ್ತರಾಗಿರುವದಿಲ್ಲ, ಆದರೆ ನಮಗೆ ಪರಿಪೂರ್ಣ ಮಾದರಿ ಇರುವದೆಂಬುದರ ಬಗ್ಗೆ ಆನಂದಿಸುತ್ತೇವೆ.

## ಆತನ ಯೌವನ ಪ್ರಾಯ

ಬಾಲಕರಿಗೂ ಬಾಲಕಿಯರಿಗೂ ಯೇಸುವು ಒಂದು ಉದಾಹರಣೆಯಾಗಿದ್ದಾನೆ. ಕ್ರಿಸ್ತನ ಯೌವನ ಪ್ರಾಯದ ಬಗ್ಗೆ ಪರಿಶುದ್ಧಾತ್ಮನು ಕೆಲವೊಂದನ್ನು ನಮಗೆ ಹೇಳಿದ್ದಾನೆ. ಆತನು ತನ್ನ ತಂದೆ, ತಾಯಿಗಳಿಗೆ "ಅಧೀನನಾಗಿದ್ದನೆಂದು" ಲೂಕ 2:51 ಹೇಳುತ್ತದೆ. ತನ್ನ ತಂದೆತಾಯಿಗಳಿಗೆ ಮಗುವು ವಿಧೇಯತೆಯನ್ನು ಕಲಿತುಕೊಳ್ಳುವುದು ಜೀವನದ ಮೊದಲಿನ ನಿಯಮಗಳಲ್ಲಿ ಒಂದಾಗಿದೆ, ಹಾಗೂ ಅದು ಬಹಳವಾಗಿ ಅಲಕ್ಷಿಸಲ್ಪಟ್ಟ ಪ್ರಾಧಾನ್ಯತೆಯಾಗಿದೆ.

ಹಾಗಿದ್ದರೂ, ಯುವಕನಂತೆ, ಯೇಸುವು ಧಾರ್ಮಿಕನಾಗಿದ್ದನು. ಆತನು ತಾನು "[ತನ] ತಂದೆಯ ಮನೆಯಲ್ಲಿ ಇರಬೇಕು" (ಲೂಕ 2:49) ಎಂದು ಹೇಳಿದನು. ಆತನು ಪಾಪವನ್ನು "ಬಿತ್ತಲಿಲ್ಲ." ಬಾಲಕರು, ಬಾಲಕಿಯರು ಇಬ್ಬರೂ ತಾವು ಯುವ ಜನರಾಗಿರುವಾಗ ಶುದ್ಧರಾಗಿರುವದಕ್ಕೂ ಭಕ್ತಿಯುಳ್ಳವರಾಗಿರುವದಕ್ಕೂ ಯೇಸುವಿನ ಉದಾಹರಣೆಯಿಂದ ಕಲಿತು ಕೊಳ್ಳತಕ್ಕದ್ದು.

## ಆತನ ಪ್ರಪಂಚದ ಕಾರ್ಯ

ಆತನು ಬಡಗಿಯನಾಗಿದ್ದನು ಎಂದು ಪರಿಶುದ್ಧ ಬರಹಗಳಲ್ಲಿ ಆಕಸ್ಮಿಕವಾಗಿ ಬರೆಯಲ್ಪಡಲಿಲ್ಲ (ಮಾರ್ಕ 6:3). ಬಡಗಿಯ ಕೆಲಸದವನಾಗಬೇಕೆಂದು ಆತನು ಎಂದೂ ಉದ್ದೇಶವುಳ್ಳವನಾಗಿರಲಿಲ್ಲ, ಆದರೆ ಆತನು ಆ ಉದ್ಯೋಗವನ್ನು ಕಲಿತುಕೊಂಡನು ಎಂದು ದಾಖಲೆಯಾಗಿರುತ್ತದೆ. ನಿಶ್ಚಯವಾಗಿಯೂ, ಕೆಲಸದ ಗೌರವವನ್ನೂ ಉದ್ಯೋಗ ಕಲಿತುಕೊಳ್ಳುವ ಒಳ್ಳೆಯ ಮನೋಭಾವನೆಯನ್ನು ನಾವು ಮೆಚ್ಚಿಕೊಳ್ಳುವದಕ್ಕೂ ಇದು ಮುಂದಿಡಲ್ಪಟ್ಟಿದೆ. ಪುರಾತನ ರಬ್ಬಿಗಳು ಉದ್ಯೋಗವನ್ನು ಕಲಿಸದಿದ್ದ ತಂದೆತಾಯಿ

ಗಳು ತಮ್ಮ ಮಗುವಿಗೆ ಕಳ್ಳತನ ಮಾಡುವದನ್ನು ಕಲಿಸುವರು ಎಂದು ಬೋಧಿಸಿದರು.

## ಆತನ ಬಾಪ್ತಿಸ್ಮ

ಬಾಪ್ತಿಸ್ಮ ಹೊಂದುವದಕ್ಕಾಗಿ, ಸುಮಾರು ಎಪ್ಪತ್ತು ಮೈಲು ದೂರ ನಡೆದು ಗಲಿಲಾಯದಿಂದ ಯೋಹಾನನು ಬಾಪ್ತಿಸ್ಮ ಮಾಡಿಸುತ್ತಿದ್ದ ಸ್ಥಳಕ್ಕೆ ಹೋದದ್ದು ಯೇಸುವಿನ ಒಂದು ಉದಾಹರಣೆಯಾಗಿದೆ. ಬಾಪ್ತಿಸ್ಮ ಹೊಂದಲು ನೀವು ಎಷ್ಟು ದೂರ ನಡೆಯುವಿರಿ? ಕೆಲವು ಜನರು ಒಂದು ಹೆಜ್ಜೆ ಕೂಡ ನಡೆಯುವದಿಲ್ಲ. ಕೆಲವರು ಬಾಪ್ತಿಸ್ಮವನ್ನು ಸಂಪೂರ್ಣವಾಗಿ ನಿರಾಕರಿಸುತ್ತಾರೆ. ಈ ಜನರು ಯೇಸುವಿನ ಉದಾಹರಣೆಯನ್ನು ಗಮನಿಸುತ್ತಿರುವದಿಲ್ಲ ಎಂಬುದು ಸ್ಪಷ್ಟವಾಗಿದೆ. ಈ ವಿಷಯದಲ್ಲಿ ಆತನ ಉದಾಹರಣೆಯು ವಿಶೇಷವಾಗಿ ದೃಢವಾದದ್ದಾಗಿದೆ. ಯಾಕಂದರೆ ತೊಳೆಯಲ್ಪಡ ಬೇಕಾದ ಯಾವದೇ ಪಾಪವಿರಲಿಲ್ಲ. ಹಾಗಿದ್ದರೂ ಆತನು ಬಾಪ್ತಿಸ್ಮವನ್ನು ಕುರಿತು ಒತ್ತಿಹೇಳಿದನು. ಆತನಿಗೆ ಯಾವ ಪಾಪಗಳಿಲ್ಲದಿದ್ದರೂ ಪಾಪಗಳ ನಿವಾರಣೆಗಾಗಿ ಎಲ್ಲಾ ಜನರೂ ಬಾಪ್ತಿಸ್ಮ ಹೊಂದ ಬೇಕೆಂದು ತನ್ನ ತಂದೆ ಆಜ್ಞಾಪಿಸಿದ್ದಾನೆಂದು ಆತನು ತಿಳಿದಿದ್ದನು. ದೇವರ ಪ್ರತಿಯೊಂದು ಆಜ್ಞೆಯನ್ನು ಪೂರೈಸಲು ಆತನು ಬಯಸಿದನು. ತನಗಾಗಿ ಆಜ್ಞೆಯು ಕೈಕೊಳ್ಳಲ್ಪಡ ಬೇಕೆಂದು ಪ್ರಸಂಗಿಯೊಂದಿಗೆ (ಸ್ನಾನಿಕನಾದ ಯೋಹಾನನೊಂದಿಗೆ) ಮಾತಾಡಿದನು. ಆತನೇ ಆರಂಭಿಸಿದನು. ನಿಮ್ಮ ಜೀವಿತಕ್ಕೆ ಸಂಬಂಧಿಸಿದಂತೆ ಈ ವಿಷಯದಲ್ಲಿ ಯೇಸುವಿನ ಉದಾಹರಣೆಯ ಬಗ್ಗೆ ನೀವು ಏನು ಹೇಳಬಹುದು?

## ಶೋಧನೆಗೆ ಆತನ ಪ್ರತಿಭಟನೆ

ಒಡೆಯನು ಶೋಧನೆಯನ್ನು ಎದುರಿಸಿದ ವಿಧಾನದಲ್ಲಿಯೂ ದೊಡ್ಡ ಉದಾಹರಣೆಯಾಗಿದ್ದಾನೆ. ಮಾನವ ಜೀವಿಯಂತೆ, ಉಳಿದ ನಮ್ಮಂತೆಯೇ ಶೋಧ ನೆಗಳಿಗೆ ಒಳಗಾಗುವಂಥವನಾಗಿದ್ದನು. ಸೈತಾನನನ್ನು ನಾವು ಎದುರಿಸಬಹುದಾದ ಸಾಧನಗಳಲ್ಲಿ ಒಂದು ಪರಿಶುದ್ಧ ಬರಹದ ವಾಕ್ಯಗಳನ್ನು ಉಪಯೋಗಿಸುವುದು. ಯೇಸುವು ಹಳೇ ಒಡಂಬಡಿಕೆಯ ವಾಕ್ಯಭಾಗಗಳನ್ನು ತಿಳಿದಿದ್ದನು ಮತ್ತು ಅವುಗಳನ್ನು ಉಲ್ಲೇಖಿಸಲು ಶಕ್ತನಾಗಿದ್ದನು. ದೇವರ ವಾಕ್ಯವು ಹರಿತವಾದ ಖಡ್ಗದಂತಿದೆ. ಹಾಗೂ ಸೈತಾನನು ಅದರ ಹರಿತವಾದ ಕೊರೆಯುವ ಶಕ್ತಿಯನ್ನು ಸಹಿಸಿಕೊಳ್ಳಲಾರನು. ನಾನು ಮತ್ತು ನೀನು ನಮ್ಮ ಪ್ರಾಣಗಳನ್ನು ಗಂಡಾಂತರಕ್ಕೆ ಗುರಿಪಡಿಸ ಬಾರದೆಂದಿದ್ದರೆ, ಸೈತಾನನ ಸವಾಲುಗಳನ್ನು ಎದುರಿಸುವಲ್ಲಿ ಮಹಾ ಉದಾಹರಣೆಯನ್ನು ನಾವು ಅನುಸರಿಸುವೆವು. ನಾವು ಬೈಬಲನ್ನು ಕಲಿಯತಕ್ಕದ್ದು ಹಾಗೂ ಅದರಿಂದ ಉಲ್ಲೇ ಖಿಸಲು ಶಕ್ತರಾಗತಕ್ಕದ್ದು.

## ತಪ್ಪಿ ಹೋದವರಿಗಾಗಿ ಆತನ ಪ್ರೀತಿ

ಪಾಪಭರಿತ ಆತ್ಮಗಳಿಗಾಗಿ ಬೋಧಿಸುವ ಆಸಕ್ತಿಯು ನಮ್ಮ ಮಹಾ ಆದರ್ಶದಲ್ಲಿ ವಿಶೇಷವಾದ ಲಕ್ಷಣವಾಗಿದೆ. ತನ್ನ ದಿನದ ಧಾರ್ಮಿಕ ನಾಯಕರೊಂದಿಗೆ ಪ್ರಸಿದ್ಧಿ ಯನ್ನು ಕಳೆದು ಕೊಳ್ಳುತ್ತಿದ್ದಾಗ, ಯೇಸುವು ಪಾಪಭರಿತ ಹಾಗೂ ಬಹಿಷ್ಕೃತ ಮಾನವತೆಯೊಂದಿಗೆ ಸಮಯ ಕಳೆದನು. ಒಂದು ಸಂದರ್ಭದಲ್ಲಿ, ಆತನಿಗೆ

ಹಸಿವೆ ಯಾಗಿದ್ದರೂ, ದೈಹಿಕ ಆಹಾರದಲ್ಲಿ ಎಲ್ಲಾ ಆಸಕ್ತಿಯನ್ನು ಕಳೆದುಕೊಳ್ಳುವಷ್ಟರ ಮಟ್ಟಿಗೆ ಒಬ್ಬ ಪಾಪಿಯೊಂದಿಗೆ ಹಂಚಿಕೊಳ್ಳಲು ಒಳಗೊಂಡನು. ಇತರರೊಂದಿಗೆ ಸುವಾರ್ತೆಯನ್ನು ಹಂಚಿಕೊಳ್ಳುವದರಲ್ಲಿ ನಿಮ್ಮ ಆಸಕ್ತಿಯ ಕೊರತೆಯಾದರೆ, ಈ ವಿಷಯದಲ್ಲಿ ನಿಮ್ಮ ನಾಯಕನನ್ನು ನೀವು ಕಡೆಗಣಿಸುತ್ತಿರುವಿರಿ.

## ಆತನ ವೈರಿಗಳಿಗಾಗಿ ಆತನ ಪ್ರೀತಿ

ತನ್ನನ್ನು ಹೀನೈಸಿದವರ ಕಡೆಗೆ ಇದ್ದ ಯೇಸುವಿನ ಮನೋಭಾವನೆಯು ಆತನ ಜೀವಿತದಲ್ಲಿ ಅತಿದೊಡ್ಡ ಅಧ್ಯಾಯಗಳಲ್ಲಿ ಒಂದನ್ನು ಒಳಗೊಂಡಿರುತ್ತದೆ. ನಮಗೆ ಒಳ್ಳೆಯದನ್ನು ಮಾಡುವವರಿಗೆ ನಾವು ಒಳ್ಳೆಯದನ್ನು ಮಾಡುವಾಗ, ತನ್ನನ್ನು ಹೀನೈಸಿದವರ ಕಡೆಗೆ ಯೇಸುವಿಗೆ ಪ್ರೀತಿಯ ಮತ್ತು ಸಹಾನುಭೂತಿಯ ಹೃದಯವಿತ್ತು, "ತಂದೆಯೇ, ಅವರಿಗೆ ಕ್ಷಮಿಸು; ತಾವು ಏನು ಮಾಡುತ್ತೇವೆಂಬದನ್ನು ಅರಿಯರು" ಎಂದು ಆತನು ಹೇಳಿದನು (ಲೂಕ 23:34). ಪೇತ್ರನು ಹೀಗೆ ಬರೆದನು,

> ... ಕ್ರಿಸ್ತನು ಸಹ ನಿಮಗೋಸ್ಕರ ಬಾಧೆಯನ್ನನುಭವಿಸಿ ನೀವು ತನ್ನ ಹೆಜ್ಜೆಯ ಜಾಡಿನಲ್ಲಿ ನಡೆಯಬೇಕೆಂದು ಮಾದರಿಯನ್ನು ತೋರಿಸಿ ಹೋದನು. ಆತನು ಯಾವ ಪಾಪವನ್ನೂ ಮಾಡಲಿಲ್ಲ, ಆತನ ಬಾಯಲ್ಲಿ ಯಾವ ವಂಚನೆಯೂ ಸಿಕ್ಕಲಿಲ್ಲ (1 ಪೇತ್ರ 2:21, 22).

ಈ ಎಲ್ಲಾ ವಿಷಯಗಳಲ್ಲಿ ಯೇಸುವನ್ನು ಅನುಸರಿಸಲು ನಮ್ಮಲ್ಲಿ ಅನೇಕರು ಶಕ್ತರಾಗುವವೆಂಬುದು ಸಂಶಯಾಸ್ಪದವಾದದ್ದಾಗಿದೆ, ಆದರೆ ಪಾಪಿಗಳು ಅದನ್ನು ಪ್ರಯತ್ನಿಸುವದಿಲ್ಲ ಹಾಗೂ ನಾವು ವರ್ಷಗಳು ದಾಟಿದಂತೆ ಚೆನ್ನಾಗಿ ಮಾಡಬಹುದು.

## ತಂದೆಗೆ ಆತನ ವಿಧೇಯತೆ

ತನ್ನ ಭೂಲೋಕದ ತಂದೆತಾಯಿಗಳಿಗೆ ವಿಧೇಯನಾಗುವದರಲ್ಲಿ ಮತ್ತು ತನ್ನ ಪರಲೋಕದ ತಂದೆಯ ಆಜ್ಞೆಗಳನ್ನು ಕೈಕೊಳ್ಳುವದರಲ್ಲಿ ಯೇಸುವಿನ ಅನುಭವವು ಗೆತ್ಸೆಮನೆ ತೋಟಕ್ಕೆ ಆತನು ಬಂದಾಗ ಆತನಿಗೆ ಸಹಾಯ ಮಾಡಿತು. ಆ ಪರಿಚಿತವಾದ ಸ್ಥಳದಲ್ಲಿ, ಸುಮಾರು ಮಧ್ಯ ರಾತ್ರಿಯ ತಾಸಿನಲ್ಲಿ ಒಡೆಯನು ಅಡ್ಡಬಿದ್ದುಕೊಂಡನು ಮತ್ತು "ಮರಣಕ್ಕೆ ತಪ್ಪಿಸಿ ಕಾಪಾಡ ಶಕ್ತನಾಗಿರುವಾತನಿಗೆ ಬಲವಾಗಿ ಕೂಗುತ್ತಾ ಕಣ್ಣೀರನ್ನು ಸುರಿಸುತ್ತಾ ಪ್ರಾರ್ಥನೆ ವಿಜ್ಞಾಪನೆಗಳನ್ನು ಸಮರ್ಪಿಸಿದನು" (ಇಬ್ರಿಯ 5:7). ಆತನು ಸಾಯಲು ಬಯಸಲಿಲ್ಲ. ಸಿಲುಬೆಗೆ ಜಡಿಯಲ್ಪಡುವುದು ನಿನಗೂ ನನಗೂ ಎಷ್ಟುವೇದನೆ ಯಾಗುತ್ತದೆಯೋ ಅಷ್ಟು ಆತನಿಗೆ ನೋವಿನಿಂದ ತುಂಬಿತ್ತು. ಆತನು ತನ್ನ ದೈಹಿಕ ಆಪೇಕ್ಷೆಯನ್ನು ಅಲ್ಲಗಳೆಯ ಬೇಕಾಗಿತ್ತು "ಹೀಗೆ ಆತನು ಮಗನಾಗಿದ್ದರೂ ಅನುಭವಿಸಿದ ಬಾಧೆಗಳಿಂದಲೇ ವಿಧೇಯತೆಯನ್ನು ಕಲಿತುಕೊಂಡನು. ಇದಲ್ಲದೆ ಆತನು ಸಿದ್ಧಿಗೆ ಬಂದು ... ತನಗೆ ವಿಧೇಯರಾಗಿರುವವರೆಲ್ಲರಿಗೂ ನಿರಂತರವಾದ ರಕ್ಷಣೆಗೆ ಕಾರಣನಾದನು" (ಇಬ್ರಿಯ 5:8, 9) ಎಂದು ಓದುತ್ತೇವೆ.

ನಾವು ಬಯಸುವಂಥದ್ದನ್ನು ನಾವು ಅಲ್ಲಗಳೆಯದಿದ್ದರೆ ಹಾಗೂ ಆತನಿಗೆ ನಿಸ್ವಾರ್ಥತೆಯಿಂದಲೂ ಪೂರ್ಣ ಹೃದಯದಿಂದಲೂ ಆತನಿಗೆ ನಮ್ಮನ್ನು ಕೊಡದಿದ್ದರೆ, ಆಗ ವಿಧೇಯರಾಗುವದನ್ನು ನಾವು ಕಲಿತುಕೊಂಡಿರುವದಿಲ್ಲ. ಯೇಸುವು ತಾನು

ದೇವರ ಕುಮಾರನಾಗಿದ್ದುದರಿಂದ ದೈಹಿಕ ಹಿಂಸೆಯನ್ನು ಬಿಟ್ಟು ಬಿಡಬೇಕೆಂದು ಕೇಳಿಕೊಳ್ಳಲಿಲ್ಲ. ಈ ಮನೋಭಾವನೆ ಆತನಿಗೆ ಇದ್ದುದರಿಂದ, ಆತನ ಧನ್ಯವಾದ ಉದಾಹರಣೆಯನ್ನು ಅನುಸರಿಸುವದನ್ನು ನಾವು ಹೇಗೆ ತಿರಸ್ಕರಿಸಬಹುದು? (ನೋಡಿರಿ ಫಿಲಿಪ್ಪಿ 2:5).

© 2009 Truth for Today